6) ಶಾಸನ ರಚನೆ

ವಿಧೇಯಕದ ಮಂಡನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ 2007

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಛೇರ್ಮನ್ :– ಪ್ರಸ್ತಾವ ಏನೆಂದರೆ, "2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ :– ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇಲ್ಲ ಇಲ್ಲ ತಕರಾರು ಮಾಡಿದರೆ ನೀವು ಸಮ್ಮ ಸುಮ್ಮನೆ ತಕರಾರು ಮಾಡುತ್ತೀರಿ ಎಂದು ಅನ್ನುತ್ತೀರಿ. ಬಿಲ್ ಕಾಪಿ ಯಾರಿಗೆ ಕೊಟ್ಟಿದ್ದೀರಿ? ಎರಡು ದಿವಸ ಮುಂಚೆ ಬಿಲ್ ಕಾಪಿ ಕೊಡಬೇಕು.

6–30 ಗಂಟೆ

ಬಿಲ್ ಕಾಪಿಯನ್ನು ನಮಗೆ ಎಲ್ಲಿ ಕೊಟ್ಟಿದ್ದೀರಿ?

ಶ್ರೀ ಹಂಪನಗೌಡ ಬಾದರ್ಲಿ :– ಹೈದರಾಬಾದ್ ಕರ್ನಾಟಕದ ಅತಿ ಹಿಂದುಳಿದ ಪ್ರದೇಶಗಳ ಶಿಕ್ಷಕರ ವಿಚಾರದಲ್ಲಿ ಒಳ್ಳೆಯದಾಗುತ್ತದೆ. ಮತ್ತೆ ಇದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ, ಇದಕ್ಕೆ ದಯವಿಟ್ಟು ಯಾರು ವಿರೋಧ ಮಾಡಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಹಂಪನಗೌಡ ತುತ್ತೂರಿ ಊದುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ನನಗೆ ಬಿಲ್ ಕಾಪಿ ಬಂದಿಲ್ಲ. ಆದ್ದರಿಂದ ಏಕೆ ಬಂದಿಲ್ಲವೆಂದು

ದಯವಿಟ್ಟು ಹೇಳಿ? ತಾವು ದಯವಿಟ್ಟು ಕುಳಿತುಕೊಳ್ಳಿ. ಈ ರೀತಿಯಾದ ಎಮೋಷನಲ್‌ನಿಂದ ಅಸೆಂಬ್ಲಿ ನಡೆಯಬೇಕಾಗಿಲ್ಲ. ಸ್ವಾಮಿ ನಮಗೆ ಬಿಲ್ ಬಂದಿಲ್ಲ. ನಿಮಗೆ ಬಂದಿರಬಹುದು, ನಮಗೆ ಬಂದಿಲ್ಲ. ಇದರ ಬಗ್ಗೆ ಹೇಳುವುದಕ್ಕೆ ನೀವ್ಯಾರು?

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ :– ಇದರಿಂದ ಉತ್ತರ ಕರ್ನಾಟಕಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಮಾಡಿ.

ಛೇರ್ಮನ್ :– ಮಾನ್ಯ ಸಚಿವರ ಹತ್ತಿರ ಪ್ರತಿ ರೆಡಿ ಇಲ್ಲದಿದ್ದರೆ, ಇದನ್ನು ನಾಳೆ ದಿವಸ ತೆಗೆದುಕೊಳ್ಳೋಣ.

ಶ್ರೀ ಬಸವರಾಜ ಎಸ್. ಹೊರಟ್ಟಿ :– ರೆಡಿ ಇದೆ. ಈಗ ಅವರಿಗೆ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಬಿಲ್ ಕೊಟ್ಟಿಲ್ಲ. ಈ ಮಟ್ಟಕ್ಕೆ ಅಸೆಂಬ್ಲಿ ಹೋದರೆ ಗತಿ ಏನು?

ಛೇರ್ಮನ್ :– ಹಳೆಯ ಬಿಲ್‌ಗೆ ತಿದ್ದುಪಡಿಯಾಗಿರತಕ್ಕಂಥದು ಈಗ ಸರ್ಕ್ಯುಲೆಟ್ ಆಗಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ಮಾನ್ಯ ಛೇರ್ಮನ್‌ರವರೆ, ತಿದ್ದುಪಡಿ ಮಾಡಿರತಕ್ಕಂಥ ಬಿಲ್ ಅನ್ನು ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ಈಗ ಕಳುಹಿಸಿಕೊಟ್ಟಿದೇನೆ. ಇದಕ್ಕೆ ಸಂಬಂಧಪಟ್ಟಂತೆ ಏನಾದರು ಕ್ಲಾರಿಫಿಕೇಶನ್ ಇದ್ದರೆ ನಾನು ಹೇಳುತ್ತೇನೆ. ಅವರು ಕೇಳತಕ್ಕಂಥ ಎಲ್ಲಾ ವಿಷಯದ ಬಗ್ಗೆ ನಾನು ಉತ್ತರ ಹೇಳುವುದಕ್ಕೆ ತಯಾರಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ಆ ಬಿಲ್‌ನ್ನು ಓದಿಲ್ಲ. ಆದ್ದರಿಂದ ನಾಳೆ ದಿವಸ ಸದರಿ ಬಿಲ್‌ನ ಪರ್ಯಾಲೋಚನೆಯಾಗಲಿ. ಈಗ ದಯಮಾಡಿ ಶೂನ್ಯವೇಳೆ ತೆಗೆದುಕೊಳ್ಳಿ.

ಛೇರ್ಮನ್ :– ಮಾನ್ಯ ಸಚಿವರೆ, ಪರ್ಯಾಲೋಚನೆ ಪ್ರಸ್ತಾವವನ್ನು ನಾಳೆ ದಿವಸ ತೆಗೆದುಕೊಳ್ಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ಆಗಬಹುದು.

ಶ್ರೀ ಹೆಚ್. ಆಂಜನೇಯ :– ಮಾನ್ಯ ಛೇರ್ಮನ್‌ರವರೆ, ಶಿಕ್ಷಕರ ವರ್ಗಾವಣೆಯಲ್ಲಿ ಕೆಲವು ತಿದ್ದುಪಡಿಯಾಗಬೇಕಾಗಿದೆ.

ಛೇರ್ಮನ್ :– ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಹಂಪನಗೌಡ ಬಾದರ್ಲಿ :– ರೈತರ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಎನ್.ಎಸ್. ಬೋಸರಾಜ್ :– ರೈತರ ಬಗ್ಗೆ ಮಾತನಾಡಬೇಕಾಗಿದೆ. ಇವತ್ತಿನ ದಿವಸ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಜವಾಬ್ದಾರಿ ನೀವೇ ಆಗುತ್ತೀರಿ.

ಛೇರ್ಮನ್ :– ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುತ್ತೇನೆ. ಈಗ ಶೂನ್ಯವೇಳೆ ತೆಗೆದುಕೊಳ್ಳುತ್ತೇನೆ. ಮೊದಲಿಗೆ ಮಾನ್ಯ ಮಾಧುಸ್ವಾಮಿಯವರು ಮಾತನಾಡಿ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ : ಚಿತ್ರಕಲಾ ಪರಿಷತ್ತಿನಲ್ಲಿ 4ನೇ ವರ್ಷದ ಅಪ್ಲೈಡ್ ಡಾಟಾದಲ್ಲಿ 40 ಮಕ್ಕಳಿಗೆ ಪರೀಕ್ಷೆಗೆ ಕೂಡಲು ಅವಕಾಶ ನೀಡದಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) :– ಚಿತ್ರಕಲಾ ಪರಿಷತ್‌ನಲ್ಲಿ ನಾಲ್ಕನೇ ವರ್ಷದ ಅಪ್ಲೈಡ್ ಡಾಟಾದಲ್ಲಿ 40 ಮಕ್ಕಳಿಗೆ ಪರೀಕ್ಷೆಗೆ ಅವಕಾಶ ಕೊಟ್ಟಿಲ್ಲ. ಅವರು ತಕ್ಷಣ ಫೀಯನ್ನು ತುಂಬಬೇಕಾಗಿದೆ. ಅವರಿಗೆ ಈವರೆಗೆ ಅಟೆಂಡೆನ್ಸ್ ಬಗ್ಗೆ ಬಿಗಿಯಾಗಿರಲಿಲ್ಲ. ಇದ್ದಕ್ಕಿದ್ದ ಹಾಗೆ 40 ಜನರಿಗೆ ಅಟೆಂಡೆನ್ಸ್ ಇಲ್ಲವೆಂದು ಈಗ ಹೇಳಿದರೆ ಹೇಗೆ? ಅವರು ನಾಳೆ ನಾಡಿದ್ದು ಪರೀಕ್ಷೆಗೆ ಹೋಗಬೇಕಾಗಿದೆ. ಇಲ್ಲದಿದ್ದರೆ ಇಷ್ಟೊಂದು ತುರ್ತಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಆ ಮಕ್ಕಳಿಗೆ ಅಟೆಂಡೆನ್ಸ್ ಕೊಡತಕ್ಕಂಥ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು. ಅವರು ನಾಲ್ಕನೇ ವರ್ಷದ ಅಪ್ಲೈಡ್ ಡಾಟಾನಲ್ಲಿರುವ ಮಕ್ಕಳು 5ನೇ ವರ್ಷದಲ್ಲಿ ಮತ್ತೇ ಅದೇ ಕಾಲೇಜಿನಲ್ಲಿ ಓದಬೇಕಾಗುತ್ತದೆ. ಆದ್ದರಿಂದ, ದಯಮಾಡಿ ವಿಶ್ವವಿದ್ಯಾಲಯಕ್ಕೆ ಒಂದು ಸೂಚನೆ ಕೊಟ್ಟು ಆ ಮಕ್ಕಳಿಗೆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಮತ್ತು ಫೀಯನ್ನು ತುಂಬಿಸಿಕೊಳ್ಳುವುದಕ್ಕೆ ಒಂದು ಸಬ್‌ಮಿಷನ್ ಮಾಡಿದ್ದಾರೆ. ಆದ್ದರಿಂದ ಆ ಸಬ್‌ಮಿಷನ್ಸ್ ತೆಗೆದುಕೊಳ್ಳುವುದಕ್ಕೆ ಏನಾದರು ಅವಕಾಶ ಮಾಡಿಕೊಡಬೇಕು. ಇದು ತುಂಬಾ ತುರ್ತಾಗಿರುವುದರಿಂದ ದಯಮಾಡಿ ಇದಕ್ಕೆ ಈಗಲೇ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) :– ಮಾನ್ಯ ಛೇರ್ಮನ್‌ರವರೆ, ಅಲ್ಲಿ 40 ಜನ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಅವಕಾಶ ಕೊಟ್ಟು ಕೆಲವರಿಗೆ